ನಗರ ಹೊರ ವಲಯದ ಅಭಿವೃದ್ಧಿಗೆ ಕಾರ್ಯಪಡೆ

5082 - ಶ್ರೀ ನಾರಾಯಣಸ್ವಾಮಿ ಎ. (ಆನೇಕಲ್) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ನಗರದ ಹೊರ ವಲಯದ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಪ್ರತ್ಯೇಕ ಕಾರ್ಯಪಡೆ ರಚಿಸುವಂತೆ ನಗರಸಭೆ ಹಾಗೂ ಪುರಸಭೆ ಅಧ್ಯಕ್ಷರು ಸರ್ಕಾರವನ್ನು ಒತ್ತಾಯಿಸಿರುವುದು ನಿಜವೇ?*

ಆ) *ಈ ವಿಚಾರದಲ್ಲಿ ಸರ್ಕಾರದ ನಿಲುವೇನು? ಕಾರ್ಯಪಡೆ ರಚಿಸಲಾಗಿದೆಯೇ? ಇಲ್ಲದಿದ್ದಲ್ಲಿ ಕಾರಣಗಳೇನು?*

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಆನೇಕಲ್ ಕ್ಷೇತ್ರದಲ್ಲಿ ನೀರಾವರಿ ಯೋಜನೆಗಳು

5083 - ಶ್ರೀ ಎ. ನಾರಾಯಣಸ್ವಾಮಿ (ಆನೇಕಲ್) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಆನೇಕಲ್ ಕ್ಷೇತ್ರದಲ್ಲಿ 1999-2000 ಸಾಲಿಗೆ ಎಷ್ಟು ಹೊಸ ಯೋಜನೆಗಳ ಪ್ರಸ್ತಾವನೆ ಬಂದಿವೆ? (ವಿವಿಧ ಯೋಜನೆಗಳ ವಿವರ ನೀಡುವುದು)*

ಆ) *ಸದರಿ ಯೋಜನೆಗಳು ಮಂಜೂರಾತಿ ಶೇಕಡಾ 30 ಹಣ ಒದಗಿಸಲಾಗಿದೆಯೇ?*

ಇ) *ಸದರಿ ಯೋಜನೆಗಳನ್ನು ಯಾವಾಗ ಪ್ರಾರಂಭಿಸಲಾಗುವುದು?*

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) 1999-2000ನೇ ಸಾಲಿನಲ್ಲಿ 10 ಹೊಸ ಕಾಮಗಾರಿಗಳನ್ನು ಆಯವ್ಯಯದಲ್ಲಿ ಪ್ರಸ್ತಾಪಿಸಲಾಗಿತ್ತು. (ವಿವಿಧ ಯೋಜನೆಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ)

ಆ) ಸದರಿ ಈ 10 ಯೋಜನೆಗಳಲ್ಲಿ 5 ಯೋಜನೆಗಳಿಗೆ ಶೇ. 30 ರಷ್ಟು ಹಣವನ್ನು ಅನುದಾನವಿದ್ದು ಈ ಯೋಜನೆಗಳಿಗೆ ಮಂಜೂರಾತಿ ದೊರೆತಿರುತ್ತದೆ.

ಇ) ಸದರಿ ಮಂಜೂರಾದ 5 ಯೋಜನೆಗಳ ಕಾಮಗಾರಿಗಳು 1999-2000ನೇ ಸಾಲಿನಲ್ಲಿ ಪ್ರಾರಂಭವಾಗಿದ್ದು ಪ್ರಗತಿಯಲ್ಲಿರುತ್ತವೆ. ಅನುದಾನ ಲಭ್ಯತೆ ಆಧರಿಸಿ ಇನ್ನುಳಿದ 5 ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದು.